# 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ನಂಜನಗೂಡು

## ಸಿ.ಸಿ.154/2026

**ಫಿರ್ಯಾದಿಃ** ರಾಜ್ಯದ ಪರವಾಗಿ ಕವಲಂದೆ ಪೊಲೀಸ್ ಠಾಣೆ

ವಿರುದ್ಧ

**ಆರೋಪಿಃ** ಪುಟ್ಟಮ್ಮ ಕೋಂ ಲೇಟ್ ಮರಿಸಿದ್ದಯ್ಯ 50 ವರ್ಷ,
ವಾಸಃದಾಸನೂರು ಗ್ರಾಮ, ನಂಜನಗೂಡು ತಾಲ್ಲೂಕು

**ಃಆಪಾದನೆ ಃ**

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ-

ದಿಃ25.12.2025 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ದಾಸನೂರು ಗ್ರಾಮದ ಪುಟ್ಟಮಾದ ರವರ ಪೆಟ್ಟಿಗೆ ಅಂಗಡಿ ಬಳಿ ಸಾರ್ವಜನಿಕ ರಸ್ತೆಯಲ್ಲಿ ಆರೋಪಿತರಾದ ನೀವು ಯಾವುದೇ ರಹದಾರಿ/ಪರವಾನಿಗೆ ಇಲ್ಲದೆ ರೂ.150/- ಬೆಲೆ ಬಾಳುವ 90 ಎಂ ಎಲ್ ನ 8 ಒರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳನ್ನು ಅಕ್ರಮವಾಗಿ ಇಟ್ಟುಕೊಂಡು ಸಾರ್ವಜನಿಕರಿಗೆ ಮದ್ಯಸೇವನೆ ಮಾಡಲು ಅನುವು ಮಾಡಿಕೊಟ್ಟಿರುವುದರಿಂದ, ಕರ್ನಾಟಕ ಅಬಕಾರಿ ಕಾಯ್ದೆ ಕಲಂ.15(ಎ) ಮತ್ತು 32(3) ರ ರೀತ್ಯಾ ನಿಮ್ಮ ಮೇಲೆ ಆಪಾದಿಸಲಾಗಿದೆ.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಉತ್ತರ ಃ

ಪ್ರಶ್ನೆ-2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?
ಉತ್ತರ ಃ

ಮೇಲ್ಕಂಡ ಆಪಾದನೆಗಳನ್ನು ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

*ದಿನಾಂಕಃ20.01.2026* 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಸ್ಥಳ ಃ ನಂಜನಗೂಡು ನಂಜನಗೂಡು